ಜ್ಯೋತಿಷ ತರಂಗಿತ

ಓಂಕಾರ ಆಶ್ರಮದಲ್ಲಿ ನಡೆದ ಜ್ಯೋತಿಷ ತಿರಿರ ಉದ್ಘಾಟನಾ ಸಮಾರಂಭದಲ್ಲಿ ಆಧ್ಯಾತ್ಮಿಕ ಚಿಂತಕರಾದ ಆನಂದ ಗುರೂಜಿ, ಓಂಕಾರ ಆಶ್ರಮದ ವೀರಾಧಿಪತಿ ಮಧುಸೂದನಾನಂದಪುರಿ ಸ್ವಾಮೀಜಿ, ರಾಜ್ಯ ಜ್ಯೋತಿಷಿಗಳ ಸಂಸ್ಥೆ ಅಧ್ಯಕ್ಷ ಡಾ ಎಸ್. ಕೃಷ್ಣಕುಮಾರ್, ದ್ವಾದಶಿ ಜ್ಯೋತಿರ್ಲಿಂಗ ದೇವಸ್ಥಾನದ ಉಪಾಧ್ಯಕ್ಷ ಎಲ್.ನಾರಾಯಣ ಕರ್ಮಾ, ವಿಶ್ವ ವಿಜಯ ಜ್ಯೋತಿಷ ವಿದ್ಯಾಲಯ ಅಧ್ಯಕ್ಷ ಡಾ.ಆರ್. ಬಾಲಕೃಷ್ಣ ಗುರೂಜಿ, ಜ್ಯೋತಿಷ ವಿದ್ವಾಂಸ ವೇದಾಂತ ಯೋಗಾಚಾರ್ಯಂತ, ಎಸ್.ಚಂದ್ರಶೇಖರ್ ಉಪಸ್ಥಿತರಿದ್ದರು.

City ಫೋಕಸ್

ಪರಿಸರ ಅಧ್ಯಯನ ಪ್ರಶಸ್ತಿ

ಭಾರತೀಯ ವಿಜ್ಞಾನ ಸಂಸ್ಥೆಯ ಸೆಂಟರ್ ಫಾರ್ ಇಕಾಲಾಜಿಕಲ್ ಸ್ಟಡೀಸ್‌ನ ಡಾ.ಟಿ.ವಿ.ರಾಮಚಂದ್ರ ಅವರಿಗೆ 2014-15 ರ ಸಾಲಿನ ತತ್ಸುತ್ತಮ ಪರಿಸರ ಅಧ್ಯಯನ ಕೇಂದ್ರ ಪ್ರಶಸ್ತಿಯನ್ನು ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಪ್ರಕಾಶ್ ಜಾವಡೇಕರ್ ನೀಡಿದರು.

ಸಾಫ್ಟ್‌ವೇರ್ ತಂದ ಸೌಭಾಗ್ಯ

- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪುಸ್ತಕಗಳ ಭರ್ಜರಿ ಮಾರಾಟ
- ಸಿಬ್ಬಂದಿ ಬಳಕೆಗೂ ಸರಳ

•ರಮೇಶ ದೊಡ್ಡಪುರ

ಬೆಂಗಳೂರು: ತಂತ್ರಜ್ಞಾನವನ್ನು ಸೂಕ್ತ ರೀತಿಯಲ್ಲಿ ಬಳಕೆ ಮಾಡಿದಲ್ಲಿ ಸಾಹಿತ್ಯ ಪುಸ್ತಕ ಲೋಕಕ್ಕೆ ಹೇಗೆ ಲಾಭವಾಗುತ್ತದೆ ಎಂಬುದಕ್ಕೆ ಇಲ್ಲಿದೆ ಒಂದು ಉದಾಹರಣೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪತಿಯಿಂದ ರವೀಂದ್ರ ಕಲಾಕ್ಷೇತ್ರದ ಬಳಿಯ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ ಪುಸ್ತಕ ಮಾರಾಟಕ್ಕೆ ಸಾಫ್ಟ್‌ವೇರ್ ಅಳವಡಿಸಿದಾಗಿನಿಂದ ಭರ್ಜರಿ ಲಾಭವಾಗುತ್ತಿದೆ. ವಾರ್ಷಿಕ ಸಾಮಾನ್ಯ ವಹಿವಾಟಿಗಿಂತ ಬಹುತೇಕ 7-8 ಪಟ್ಟು ಹೆಚ್ಚು ಮೊತ್ತದ ಪುಸ್ತಕಗಳು ಮಾರಾಟವಾಗುತ್ತಿವೆ.

ರಿಟೇಲಿಯಂದ ಫ್ರಿಂಟ್‌ವರೆಗೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಾಗೂ ಅಕಾಡೆಮಿಗಳಿಂದ ಪ್ರಕಟಿತ ಪುಸ್ತಕಗಳ ಮಾರಾಟಕ್ಕೆ 2008ರಲ್ಲಿ ರವೀಂದ್ರ ಕಲಾಕ್ಷೇತ್ರ ಆವರಣದಲ್ಲಿ ಸಿರಿಗನ್ನಡ ಪುಸ್ತಕಮಳಿಗೆ ಆರಂಭಿಸಲಾಗಿತ್ತು. ಆದರೆ, ಇಲಾಖೆ ಅಡಿಯಲ್ಲಿರುವ ಅಕಾಡೆಮಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸೇರಿ 12 ಸಂಸ್ಥೆಗಳಿಂದ ಪುಸ್ತಕಗಳನ್ನು ಪಡೆದು, ಮಾರಾಟ ಮಾಡಿದ ನಂತರ ಆದೇ ಸಂಸ್ಥೆಗಳಿಗೆ ಮಾರಾಟದ ಹಣವನ್ನು ನೀಡುವುದೇ ದೊಡ್ಡ ತಲೆನೋವಾಗಿತ್ತು.

ಎಲ್ಲ ಸಂಸ್ಥೆಗಳಿಗೂ ಪ್ರತ್ಯೇಕ ರೀತಿ, ಲೆಕ್ಕದ ಪುಸ್ತಕ ನಿರ್ವಹಿಸಬೇಕಾದ ಅನಿವಾರ್ಯತೆಯಿತ್ತು. ಇದಲ್ಲದರ ಕಾರಣಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಪುಸ್ತಕ ಪ್ರಾಧಿಕಾರದ ಪುಸ್ತಕಗಳನ್ನಷ್ಟೇ ಮಾರಾಟಕ್ಕೆ ಸ್ವೀಕರಿಸಲಾಗುತ್ತಿತ್ತು. ತಮ್ಮಲ್ಲಿ ಪ್ರಕಟವಾದ ಪುಸ್ತಕಗಳಿಗೆ ಮಾರಾಟ ಮಳಿಗೆ ಇಲ್ಲವೆಂಬ ಕಾರಣಕ್ಕೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಕನ್ನಡ ಭವನದಲ್ಲೇ ಪುಸ್ತಕ ಮಾರಾಟ ನಡೆಸುವಂತಾಗಿತ್ತು.

ಎಲ್ಲ ಕೆಲಸವೂ ಸಲೀಸು

2015ರ ಜು.13ರಿಂದ ಸಿರಿಗನ್ನಡ ಮಳಿಗೆಯಲ್ಲಿ ಸಾಫ್ಟ್‌ವೇರ್ ಅಳವಡಿಸಲಾಗಿದೆ. ಎಲ್ಲ ಅಕಾಡೆಮಿಗಳು ಹಾಗೂ ಸಂಸ್ಥೆಗಳ ಪಟ್ಟಿಯನ್ನೂ ಸಾಫ್ಟವೇರ್‌ಗೆ ಅಳವಡಿಸಲಾಗಿದೆ. ಗ್ರಾಹಕರು ಖರೀದಿಸಿದ ಯಾವುದೇ ನಿರ್ದಿಷ್ಟ ಪುಸ್ತಕದ ಹೆಸರನ್ನು ಟೈಪ್ ಮಾಡಿದ ಕೂಡಲೆ ಪುಸ್ತಕದ ಬೆಲೆ ಮೂಡಿಬರುತ್ತದೆ. ಅಕ್ಕೆ ತಕ್ಕಪ್ಪು ದರ ಪಾವತಿಸಿದರೆ ರಸೀದಿ ಸಿಗಲಾಗುತ್ತದೆ. ಈ ವ್ಯವಸ್ಥೆಯಲ್ಲಿ ಉತ್ತಮವಾದದ್ದೆಂದರೆ ಪುಸ್ತಕ ಖರೀದಿಸಿದ ತಕ್ಷಣವೇ ಅದರ ಹಣ ನೇರವಾಗಿ ಪ್ರಕಾಶನ ಸಂಸ್ಥೆಯ ಲೆಕ್ಕಕ್ಕೆ ಜಮೆ ಆಗುತ್ತದೆ.

ದಾಸ್ತಾನು ಖಾಲಿ ಪ್ರಶ್ನೆಯಿಲ್ಲ

ಇದೇ ರೀತಿಯ ಸಾಫ್ಟ್‌ವೇರನ್ನು ಎಲ್ಲ 12 ಸಂಸ್ಥೆಗಳಿಗೂ ನೀಡಲಾಗಿದೆ. ಆಯಾ ಕಚೇರಿಯಲ್ಲಿ ಇದರ ಹೊಣೆ ಹೊತ್ತ ಸಿಬ್ಬಂದಿ, ತಮ್ಮ ಸಂಸ್ಥೆಯ ಎಷ್ಟು ದಾಸ್ತಾನು ಉಳಿದಿದೆ ಎಂಬುದನ್ನು ಕುಳಿತಲ್ಲೇ ವೀಕ್ಷಿಸಿ ಆಗತ್ಯ ಪುಸ್ತಕಗಳನ್ನು ಮಳಿಗೆಗೆ ಕಳಿಸಿಕೊಡುತ್ತಾರೆ. ಈ ಹಿಂದಿನ ವ್ಯವಸ್ಥೆಯಂತೆ ಮಳಿಗೆಯವರು ದಾಸ್ತಾನು ಖಾಲಿಯಾದ ನಂತರ ಎಷ್ಟೋ ದಿನಗಳಲ್ಲಿ ಪುಸ್ತಕಗಳು ಆಗಮಿಸುವ ಪರಿಪಾಠ ಇಲ್ಲದಂತಾಗಿದೆ ಎಂದು ಇದಿಗ ಮಳಿಗೆಯನ್ನು ನಿರ್ವಹಿಸುತ್ತಿರುವ ಅಜ್ಜಿಮನೆ ನಾಗೇಂದ್ರ ತಿಳಿಸಿದ್ದಾರೆ.

ರಿಯಾಯಿತಿ ತಲೆಬಿಸಿಯೂ ಇಲ್ಲ

ಅಕಾಡೆಮಿಗಳು ತಮ್ಮದೇ ರೀತಿಯಲ್ಲಿ ಪುಸ್ತಕಗಳಿಗೆ ರಿಯಾಯಿತಿ ನೀಡುತ್ತವೆ. ಕೆಲವು ಅಕಾಡೆಮಿಗಳು ಎಲ್ಲ ಪುಸ್ತಕಕ್ಕೂ ಏಕ ರೀತಿಯ ರಿಯಾಯಿತಿ ಘೋಷಿಸಿದರೆ, ಕನ್ನಡ ಪುಸ್ತಕ ಪ್ರಾಧಿಕಾರದಲ್ಲಿ ಪುಸ್ತಕ ಮುದ್ರಣವಾದ ವರ್ಷದ ಆಧಾರದಲ್ಲಿ ನಿಗದಿಯಾಗುತ್ತದೆ. ಐದು ವರ್ಷಕ್ಕಿಂತ ಕಡಿಮೆಯಿದ್ದರೆ ಕೇ.15, ಆರು ವರ್ಷ ಮೇಲ್ಪಟ್ಟಾದರೆ ಕೇ.50 ರಿಯಾಯಿತಿ ಇರುತ್ತದೆ. ಈ ರೀತಿಯ ರಿಯಾಯಿತಿಗಳನ್ನು ಲೆಕ್ಕ ಹಾಕುವುದೇ ಸಿಬ್ಬಂದಿಗೆ ತಲೆನೋವಾಗಿತ್ತು. ಇದಿಗ ಸಾಫ್ಟ್‌ವೇರ್ ತಾನೇ ರಿಯಾಯಿತಿ ಲೆಕ್ಕ ಹಾಕುತ್ತದೆ. ವರ್ಷ ಕಳೆದಂತೆ ಆ ಪುಸ್ತಕದ ರಿಯಾಯಿತಿ ದರವನ್ನು ಬದಲಾಯಿಸಿಕೊಳ್ಳುತ್ತದೆ.

ಎಲ್ಲ ಜಿಲ್ಲೆಗಳಿಗೂ ವಿಸ್ತರಣೆ

ಇದೇ ಸೇವೆಯನ್ನು ಎಲ್ಲ ಜಿಲ್ಲೆಗಳ ಸಹಾಯಕ ನಿರ್ದೇಶಕರ ಕಚೇರಿಗಳಿಗೆ ವಿಸ್ತರಿಸಲು ಸಿದ್ಧತೆ ನಡೆದಿದೆ. ಈಗಾಗಲೇ ಎಲ್ಲೆಡೆ ಪುಸ್ತಕ ಮಾರಾಟ ನಡೆಸಬೇಕೆಂದು ತಿಳಿಸಲಾಗಿದ್ದರೂ, ಎಲ್ಲ ಅಕಾಡೆಮಿಗಳಿಗೆ ಲೆಕ್ಕ ಇರಿಸಿಕೊಳ್ಳುವ ತಾಪತ್ರಯದ ಕಾರಣಕ್ಕೆ ಅಧಿಕಾರಿಗಳು ಆಸಕ್ತಿ ತೋರುತ್ತಿರಲಿಲ್ಲ. ಇದಿಗ ಎಲ್ಲ ಜಿಲ್ಲೆಗಳಿಗೂ ಕಂಪ್ಯೂಟರ್‌ಗಳನ್ನು ರವಾನಿಸಲಾಗುತ್ತಿದೆ. ಈಗಾಗಲೇ ಇರುವ ದಾಸ್ತಾನನ್ನು ನಮೂದಿಸಿದ ನಂತರ ಮಾರಾಟ ಆರಂಭವಾಗುತ್ತದೆ.

ಭರ್ಜರಿ ಮಾರಾಟ

ಪ್ರತಿ ವರ್ಷ ಸರಾಸರಿ 1-1.5 ಲಕ್ಷ ರೂ. ವ್ಯಾಪಾರವಾಗುತ್ತಿದ್ದ ಮಳಿಗೆಯಲ್ಲಿ 2015ರಲ್ಲಿ ಬರೋಬ್ಬರಿ 13.15 ಲಕ್ಷ ರೂ. ಮೌಲ್ಯದ ಪುಸ್ತಕಗಳು ಮಾರಾಟವಾಗಿವೆ. ಸಾಫ್ಟ್‌ವೇರ್ ಅಳವಡಿಕೆಯಿಂದ ಎಲ್ಲ ಅಕಾಡೆಮಿಗಳೂ ಪುಸ್ತಕ ಸರಬರಾಜು ಮಾಡುತ್ತಿವೆ. ಸಾಮಾನ್ಯರಲ್ಲೂ ಈ ಸೇವೆಯ ಕುರಿತು ವಿಶ್ವಾಸ ಮೂಡುತ್ತಿರುವ ಕಾರಣ ಹೆಚ್ಚೆಚ್ಚು ಜನರು ಆಗಮಿಸಿ ಖರೀದಿಸುತ್ತಿದ್ದಾರೆ.

ದಾಸ್ತಾನು ಖಾಲಿಯಾಗಿದೆ ಎಂಬುದನ್ನು ಸ್ವತಃ ಅಕಾಡೆಮಿಗಳೇ ತಿಳಿದು ಅಪ್‌ಡೇಟ್ ಮಾಡಬಹುದು. ಗ್ರಾಹಕರು ಕಾಯುವ ಪರಿಸ್ಥಿತಿಯಿಲ್ಲ. ಒಂದೇ ಪುಸ್ತಕ ಅಥವಾ ಒಂದು ರೂ. ಕೂಡ ಪೋಲಾಗುವ ಸಾಧ್ಯತೆಯಿಲ್ಲ. ಸಿಬ್ಬಂದಿ ಬಳಕೆಗೂ ಅನುಕೂಲವಾಗಿರುವುದರಿಂದ ಮಾರಾಟ ಮಾಡಲು ಉತ್ಸೇಜಿತರಾಗುತ್ತಿದ್ದಾರೆ. ಸದ್ಯದಲ್ಲೇ ರಾಜ್ಯದ್ಯಂತ ವಿಸ್ತರಿಸಲಿದ್ದೇವೆ.

। ಕೆ.ಎ. ದಯಾನಂದ
ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

Softvent Article on Vijayavani